Sri K. PUTTASWAMY (Minister for Labour).—Sir, the subject now on hand is introduction of Bills. Let it be over and then Sri Sivappa can have his say. Sir, I beg to introduce:

"The Mysore Legislature Salaries (Amendment) Bill, 1968, which has been published in the Mysore Gazette under Rule 64 of the Rules of Procedure and Conduct of Business in the Mysore Legislative Assembly."

Sir, on behalf of the Minister for Revenue, I beg to introduce:

"The Mysore Courts of Civil Judge (Validation Proceedings) Bill, 1967"

which has been published in the Mysore Gazette under Rule 64 of the Rules of Procedure and Conduct of Business in the Mysore Legislative Assembly.

Mr. DEPUTY SPEAKER.—Bills are introduced.

Sri Y. RAMAKRISHNA (Minister for Health).—Sir, I beg to introduce:

"The Mysore Health Cess (Amendment) Bill, 1968"

which has been published in the Mysore Gazette under Rule 64 of the Rules of Procedure and Conduct of Business in the Mysore Legislative Assembly.

Mr. DEPUTY SPEAKER.—The Bill is introduced.

## PETITION FROM CERTAIN RYOTS *re*: ABOLITION OF LAND REVENUE, ETC.

*Presentation.*

ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ಈಗ ನಾನು ತಮ್ಮ ಅಪ್ಪಣೆಯನ್ನು ಬೇಡಿ ಈ ಸಭೆಯ ಮುಂದೆ ಮೈಸೂರು ಪ್ರದೇಶದ ರೈತರ ಪರವಾಗಿ 74 ಜನ ರೈತರ ಪ್ರತಿನಿಧಿಗಳು ರಾಜು ಮಾಡಿರತಕ್ಕ ಭೂಕಂದಾಯ ರದ್ದುಮಾಡತಕ್ಕ ವಿಚಾರ, ಲೆವಿ ಪದ್ಧತಿಯನ್ನು ರದ್ದುಮಾಡತಕ್ಕ ವಿಚಾರ, ಭೂರಹಿತ ರೈತರಿಗೆ ಭೂಮಿಯನ್ನು ಹಂಚಿಕೆಮಾಡತಕ್ಕ ವಿಚಾರ ಮತ್ತು ಇತ್ಯಾದಿ ವಿಚಾರಗಳನ್ನು ಒಳಗೊಂಡಂತಹ ಪೆಟಿಷನ್‌ನ್ನು ಈ ಸಭೆಯ ಅವಗಾಹನೆಗೆ ತಮ್ಮ ಮೂಲಕ ಇಡುತ್ತೇನೆ.

Mr. DEPUTY SPEAKER.—The petition is presented.

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ನಾವು ಹೋದ ಶಾಸನಸಭೆ ಸೇರಿದಂದಿನಿಂದ ಈಚೆಗೆ ಈ ಸಭೆ ಸೇರುವುದಕ್ಕೆ ಮುಂಚೆ ಮಧ್ಯೆ ಅನೇಕ ಮಹತ್ವದ ಘಟನೆಗಳು ಮೈಸೂರು ದೇಶದಲ್ಲಿ ನಡೆದಿವೆ. ಮುಖ್ಯವಾದ ಘಟನೆ ಮಂತ್ರಿಮಂಡಲದ ಬದಲಾವಣೆ, ಹೊಸ ಮುಖ್ಯ ಮಂತ್ರಿಗಳು ಬಂದಿದ್ದಾರೆ ಮತ್ತು ಮಂತ್ರಿಮಂಡಲದಲ್ಲಿಯೂ ಕೂಡ ಕೆಲವರು ಹಳಬರು ಇರಬಹುದು, ಹೊಸಬರು ಅನೇಕರು ಇದ್ದಾರೆ. ಹೊಸ ಮಂತ್ರಿಮಂಡಲ ಇವತ್ತು ಈ ದೇಶದಲ್ಲಿ ಅಧಿಕಾರವನ್ನು ವಹಿಸಿಕೊಂಡಿದೆ. ಹೊಸ ಮಂತ್ರಿಮಂಡಲ ಅಧಿಕಾರಕ್ಕೆ ಬಂದ ಮೇಲೆ ಶಾಸನಸಭೆ ಸೇರಿರತಕ್ಕ ಈ ಮೊಟ್ಟಮೊದಲನೆ ಅಧಿವೇಶನದಲ್ಲಿ ಈಗ ನೂತನ ಮಂತ್ರಿಮಂಡಲವು ಅಧಿಕಾರ ವಹಿಸಿಕೊಂಡಿರುವಾಗ ಅದರ ನೀತಿ, ಧೋರಣೆ ಏನಿವೆ ಎಂಬುದನ್ನು ಈ ಸಭೆಯು ಮುಂದಿಟ್ಟು

ಅದಕ್ಕೆ ಸಭೆಯು ಒಪ್ಪಿಗೆ ಪಡೆಯುವುದು ಅದಕ್ಕೆ ಈ ಸಭೆಯು ಒಪ್ಪಿಗೆಯಿದೆ, ಬಹುಮತವಿದೆ ಎಂದು ಸೂಚಿಸುವುದಕ್ಕೆ ಇರುವ ಏಕೈಕ ಮಾರ್ಗ. ಆ ಮಾರ್ಗವನ್ನು ಈ ದಿವಸ ಅನುಸರಿಸುವುದು ಒಂದು ಒಳ್ಳೆಯ ಸಂಪ್ರದಾಯ. ಅವೇ ರೀತಿಯಲ್ಲಿ ನಮ್ಮ ನೂತನ ಮುಖ್ಯ ಮಂತ್ರಿಗಳು ಮಾಡುತ್ತಾರೆಂದು ನಾನಾದರೂ ನಂಬಿದ್ದೇನೆ.

2–30 P.M.

ಇಷ್ಟೇ ಅಲ್ಲ, ಇಂದು ಕಾಂಗ್ರೆಸ್ ಪಕ್ಷದಲ್ಲೇ ನೂತನ ಮಂತ್ರಿಮಂಡಲದ ಬಗ್ಗೆ ಭಿನ್ನಾಭಿಪ್ರಾಯವಿದೆ ಎಂಬುದನ್ನು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಆದುದರಿಂದ ಇಂದು ಹೊಸ ಮಂತ್ರಿಮಂಡಲಕ್ಕೆ ಸಾಕಷ್ಟು ಬೆಂಬಲವಿದೆಯೇ ಎಂಬುದನ್ನು ಸ್ಪಷ್ಟವಾಗಬೇಕಾದ್ದು ಅವಶ್ಯಕವಾಗಿದೆ. ಈ ಶಂಕೆಯನ್ನು ನಿವಾರಣೆ ಮಾಡಲು ಇರುವ ಏಕಮಾರ್ಗ ನೂತನ ಮಂತ್ರಿಮಂಡಲದ ಪ್ರಣಾಳಿಕೆಯನ್ನು ಈ ಸಭೆಯ ಮುಂದಿಟ್ಟು, ಅದಕ್ಕೆ ಒಪ್ಪಿಗೆ ಪಡೆದು ಸಭೆಯ ಬಹುಮತ ತಮ್ಮ ಕಡೆಗಿದೆ ಎಂದು ತೋರಿಸುವುದು. ಹೊಸ ಮಂತ್ರಿಮಂಡಲ ರಚನೆಯಾದಮೇಲೆ ಅದರ ನೀತಿಗೆ ಸಂಬಂಧಪಟ್ಟಂತೆ ಒಂದು ಕೇಳಿಕೆ ಕೊಡುವ ಒಂದು ಸಂಪ್ರದಾಯವಿದೆ. ಕಾನೂನು ರೀತಿಯಾಗಿ ಹಾಗೆ ಹೇಳಿಕೆ ಕೊಡಬೇಕೆಂಬ ಕಡ್ಡಾಯವಿಲ್ಲದಿದ್ದರೂ ಕೂಡ ಹಾಗೆ ಮಾಡಬೇಕಾದ್ದು ಒಂದು ಸತ್ಸಂಪ್ರದಾಯವಾಗಿದೆ. ಪ್ರಜಾಪ್ರಭುತ್ವದಲ್ಲಿ ಈ ರೀತಿ ಮಾಡಬೇಕಾದ್ದು ಅವಶ್ಯಕ. ಹಾಗೆ ಮಾಡಿ ಹೊಸ ಮಂತ್ರಿಮಂಡಲ ಅಧಿಕಾರಕ್ಕೇರಿಕೆ ಬಂತು, ಹಿಂದಿನ ಮಂತ್ರಿಮಂಡಲವೇಕೆ ಹೋಯಿತು ಎಂದು ಒಂದು ವಿವರಣೆ ಕೊಟ್ಟರೆ ಈ ಸಭೆಯ ನಂಬಿಕೆಯನ್ನು ಪಡೆಯುವುದಕ್ಕೆ ಮತ್ತು ಸಭೆಯವರು ಹೊಂದಿರುವ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕೆ ಅವಕಾಶ ಆಗುತ್ತದೆ. ಈ ಕೆಲಸವನ್ನು ನೂತನ ಮುಖ್ಯ ಮಂತ್ರಿಗಳು ಮಾಡುವುದರ ಮೂಲಕ ಈ ಸಭೆಯ ನಂಬಿಕೆಗೆ ಪಾತ್ರರಾಗಬೇಕು ಎಂದು ಅಧ್ಯಕ್ಷರ ಮುಖಾಂತರ ಸರಕಾರದ ಗಮನಕ್ಕೆ ತರುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಿತ್ರವಾದ ಬೇಡಿಕೆಯನ್ನು ಸಭೆಯ ಮುಂದಿಟ್ಟಿದ್ದಾರೆ. ಹೊಸದಾಗಿ ಮಂತ್ರಿಮಂಡಲ ರಚನೆಯಾದಮೇಲೆ ಅದರ ನೀತಿ, ಧ್ಯೇಯ, ಧೋರಣೆ ಏನಿದೆ ಎಂಬುದನ್ನು ಈ ಸಭೆಯಲ್ಲಿ ಹೇಳಿ ಅದಕ್ಕೆ ಸಭೆಯ ಒಪ್ಪಿಗೆ ಪಡೆಯಬೇಕು ಎಂದು ಹೇಳಿದ್ದಾರೆ. ವಿರೋಧ ಪಕ್ಷದ ನಾಯಕರು ತಮ್ಮ ಪಕ್ಷದ ನಾಯಕತ್ವವನ್ನು ಬಹಳ ದಿವಸಗಳಿಂದ ವಹಿಸಿಕೊಂಡಿದ್ದಾರೆ, ಅವರು ಹೊಸದಾಗಿ ಈ ಸಭೆಗೆ ಬಂದಿಲ್ಲ. ಹಾಗಿರುವಾಗ ಅವರು ಈ ರೀತಿಯ ಒಂದು ವಿವರಣೆ ಕೇಳಿರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಮಂತ್ರಿಮಂಡಲವೇಕೆ ಬದಲಾವಣೆಯಾಯಿತು ಹೇಗೆ ಆಯಿತು ಎಂಬುದು ಎಲ್ಲರಿಗೂ ಗೊತ್ತಿದೆ. ಮತ್ತೆ ಅದನ್ನು ಇಲ್ಲಿ ಹೇಳಿ ಈ ಮಾನ್ಯ ಸಭೆಯ ಮುಂದೆ ಪ್ರಾಮುಖ್ಯವಾದ ಕಾರ್ಯಕಲಾಪಗಳಿರುವಾಗ ಸಭೆಯ ಕಾಲವನ್ನು ಕಳೆಯಬಾರದು ಎಂಬುದು ನನ್ನ ಅಭಿಪ್ರಾಯ. ನಮ್ಮ ಮಂತ್ರಿಮಂಡಲ ಬರುವುದಕ್ಕೆ ಕಾರಣವೇನು ಎಂದರೆ ನನಗಿಂತ ಮೊದಲು ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರು ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಆಯ್ಕೆಯಾದಮೇಲೆ ಈ ಸಭೆಯಲ್ಲಿ ಅನೇಕ ಸದಸ್ಯರು ಅವರು ಇಲ್ಲಿ ಮುಖ್ಯಮಂತ್ರಿಗಳಾಗಿಯಾದರೂ ಇರಬೇಕು ಅಥವಾ ಕಾಂಗ್ರೆಸ್ ಅಧ್ಯಕ್ಷರಾಗಿಯಾದರೂ ಹೋಗಿ ಅಲ್ಲಿ ಅಧಿಕಾರ ವಹಿಸಿಕೊಳ್ಳಬೇಕು, ಏಕೆ ಎರಡು ಅಧಿಕಾರಗಳನ್ನೂ ವಹಿಸಿಕೊಂಡಿದ್ದಾರೆ, ಹಾಗೆ ಎರಡನ್ನೂ ವಹಿಸಿಕೊಳ್ಳಬಾರದು, ಎಂದು ಅನೇಕವಾಗಿ ಹೇಳಿದ್ದಾರೆ. ಹಾಗಿರುವಾಗ ಮಂತ್ರಿಮಂಡಲವೇಕೆ ಬದಲಾವಣೆಯಾಯಿತೆಂಬುದು ಎಲ್ಲರಿಗೂ ಗೊತ್ತಿದೆ. ವಿಚಾರ ಅವರಿಗೆ ತಿಳಿದಿದ್ದರೂ ಕೂಡ ಹೇಳಿಕೆ ಕೊಡಬೇಕೆಂದು ಕೇಳುತ್ತಿದ್ದಾರೆ. ಆ ವಿಚಾರದಲ್ಲಿ ನಾನು ಬೇಕಾದರೆ ಒಂದು ಗಂಟೆ ಕಾಲ ಭಾಷಣ ಮಾಡಬಲ್ಲೆ. ಆದರೆ ಸಭೆಯ ಅಮೂಲ್ಯವಾದ ಕಾಲ ವ್ಯರ್ಥವಾಗತ್ತದೆ. ಹೊಸ ಮಂತ್ರಿಮಂಡಲ ಏಕೆ ಬಂತೆಂಬುದು ಎಲ್ಲರಿಗೂ ಗೊತ್ತಿರುವುದರಿಂದ ನಾನು ಆ ಸಂಬಂಧದಲ್ಲಿ ಹೇಳಿಕೆಯನ್ನೇನೂ ಕೊಡಬೇಕಾಗಿಲ್ಲ. ಮಂತ್ರಿಮಂಡಲ ಬದಲಾವಣೆಯಾದ ವಾತ್ಸಲ್ಯಕ್ಕೇ ಹೊಸ ನೀತಿಯನ್ನು ಹಾಕಿಕೊಳ್ಳತಕ್ಕ ಅವಶ್ಯಕತೆಯೇನೂ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ನೆನಪಿನಲ್ಲಿಡಬೇಕು. ಮೊದಲಿದ್ದೂ ಕಾಂಗ್ರೆಸ್ ಸರಕಾರ, ಈಗಿರುವುದೂ ಕಾಂಗ್ರೆಸ್ ಸರಕಾರ. ಕಾಂಗ್ರೆಸ್ಸಿನ ನೀತಿ, ಧೋರಣೆ ತಿಳಿದೇ ಇದೆ. ಈಗೇನೂ ನೀತಿಯಲ್ಲಾಗಲೀ, ಧೋರಣೆ ಅಥವಾ ಧ್ಯೇಯದಲ್ಲಾಗಲೀ ಬದಲಾವಣೆಯಾಗುವುದಿಲ್ಲ. ಚುನಾವಣೆಯಲ್ಲಿ ಯಾವ ಪಕ್ಷಕ್ಕೆ ಬಹುಮತ ದೊರೆಯುತ್ತದೆಯೋ ಅದು

(ಶ್ರೀ ವೀರೇಂದ್ರ ಪಾಟೀಲ್)

ನರಕಾರವನ್ನು ರಚಿಸುವುದು ವಾಡಿಕೆ. ಇಂದು ಕಾಂಗ್ರೆಸ್ ನರಕಾರ ಅಧಿಕಾರದಲ್ಲಿದೆ, ಅದೇ ಹಿಂದಿನಿಂದಲೂ ಮುಂದುವರೆದಿದೆ. ಆದುದರಿಂದ ಹೊಸ ನೀತಿ, ಥೋರಣಿ ಮುಂತಾದ್ದೇನೂ ಇಲ್ಲ.

ಅಮೇಲೆ ನಮ್ಮ ಪಕ್ಷದಲ್ಲಿ ಒಡಕುಂಟಾಗಿದೆ ಎಂದು ಪ್ರಸ್ತಾಪಮಾಡಿದ್ದಾರೆ. ಅದನ್ನು ಅನೇಕ ದಿವಸಗಳಿಂದ ಹೇಳುತ್ತಿದ್ದಾರೆ. ಅದು ಪಕ್ಷಕ್ಕೆ ನಂಬಂಧಪಟ್ಟ ಪ್ರಶ್ನೆಯಾದ್ದರಿಂದ ಆ ವಿಚಾರದಲ್ಲಿ ಅವರು ಪ್ರಸ್ತಾಪ ಮಾಡಬೇಕಾದ ಅವಶ್ಯಕತೆಯಿಲ್ಲ. ಅವರು ತಮ್ಮ ಪಕ್ಷದ ವಿಚಾರವನ್ನು ನೋಡಿಕೊಂಡರೆ ಸಾಕಾಗಿದೆ. ನಮ್ಮಲ್ಲೇನೂ ಒಡಕಿಲ್ಲ. ಸಾಮಾನ್ಯವಾಗಿ ಒಂದು ಮನೆಯಲ್ಲಾಗಲೀ ಒದು ಕುಟುಂಬದಲ್ಲಾಗಲೀ ಏನಾದರೂ ಒಂದು ಸಮಸ್ಯೆಯಿರುವುದು ಸ್ವಾಭಾವಿಕ. ಅದು ಅವರವರಿಗೆ ಸಂಬಂಧಪಟ್ಟದ್ದು. ಇತರರು ಆ ವಿಚಾರದಲ್ಲಿ ಕೈಹಾಕ ಬೇಕಾದ ಅವಶ್ಯಕತೆ ಇಲ್ಲ. ನಮ್ಮ ಪಕ್ಷದಲ್ಲಿ ಒಗಟ್ಟಿದೆ, ಅದು ಮುಂದುವರೆಯುತ್ತಿದೆ. ಆ ಬಗ್ಗೆ ವಿರೋಧ ಪಕ್ಷದ ನಾಯಕರು ಚಿಂತಮಾಡಬೇಕಾಗಿಲ್ಲ.

ಕೊನೆಯದಾಗಿ ಹೇಳಬೇಕಾದರೆ ಯಾವ ಸಮಸ್ಯೆ ಬಂದರೂ ಕೂಡ ಆ ಪಕ್ಷ ಈ ಪಕ್ಷ ಎಂದು ಬೇಧ ಮಾಡದೆ ಎಲ್ಲರೂ ಕರೆತು ಅದನ್ನು ಬಗೆಹರಿಸಬೇಕು ಎಂದು ನಾನು ಅನೇಕ ಸಂದರ್ಭಗಳಲ್ಲಿ ಅವಕಾಶ ಸಿಕ್ಕಿದಾಗಲೆಲ್ಲಾ ಹೇಳಿದ್ದೇನೆ. ಇದಕ್ಕೆ ನರಕಾರಿ ಪಕ್ಷದ ಸಹಕಾರ ವಲ್ಲದೆ ವಿರೋಧ ಪಕ್ಷದ ಸಹಕಾರವೂ ಕೂಡ ಅವಶ್ಯಕವೆಂದು ಅದನ್ನು ಕೋರಿದ್ದೇನೆ. ಸಾಧಾರಣವಾಗಿ ಯಾವುದಾದರೂ ಜಟಿಲ ಪ್ರಶ್ನೆಗಳು ಬಂದಾಗ ಪಕ್ಷಭೇಧವಿಲ್ಲದೆ ಸಮಗ್ರ ದೃಷ್ಟಿಯಿಂದ ನೋಡಬೇಕು. ಎಲ್ಲರೂ ಕರೆತು ವಿಮರ್ಶೆಮಾಡಿ ಅದನ್ನು ಬಗೆಹರಿಸಬೇಕು. ಈ ವಿಚಾರದಲ್ಲಿ ವಿರೋಧ ಪಕ್ಷದ ನಾಯಕರ ಮೇಲೂ ಕೂಡ ಒಂದು ದೊಡ್ಡ ಜವಾಬ್ದಾರಿಯಿದೆ. ಅದನ್ನು ನಿರ್ವಾಹಮಾಡಿ ದೇಶಸೇವೆ ಮಾಡಬೇಕೆಂಬುದೇ ನಮ್ಮೆಲ್ಲರ ಉದ್ದೇಶ. ದೇಶದಲ್ಲಿ ಪ್ರಗತಿ ಸಾಧಿಸಲು ಪಕ್ಷಬೇಧವಿಲ್ಲದೆ ಪ್ರಜಾಪ್ರಭುತ್ವದಲ್ಲಿ ಆಳುವ ಪಕ್ಷದೊಂದಿಗೆ ಇತರ ಪಕ್ಷಗಳವರೂ ಕೂಡ ಸಹಕರಿಸಿ ಸಹಾಯಮಾಡಬೇಕು ಎಂದು ಮತ್ತೊಮ್ಮೆ ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸಹಕಾರ ನೀಡುವಾಗ ರಚನಾತ್ಮಕ ದೃಷ್ಟಿಯಿಂದ ಯಾವ ಯಾವ ಟೀಕೆಗಳನ್ನು ಮಾಡುತ್ತೀರಿ, ರಚನಾತ್ಮಕವಾದ ದೃಷ್ಟಿಯಿಂದ ಯಾವ ಯಾವ ಸಲಹೆಗಳನ್ನು ಮಾಡುತ್ತೀರಿ, ಅದನ್ನೆಲ್ಲ ಕೂಲಂಕಷವಾಗಿ ವಿಚಾರ ಮಾಡುತ್ತೇನೆ, ಮತ್ತು ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆ ರೀತಿಯಿಂದ ನಾವು ಇಂದು ಸೇರಿ ಈ ನಾಡನ್ನು ಕಟ್ಟೋಣ, ಈ ನಾಡನ್ನು ಬೆಳಗೋಣ, ಈ ನಾಡನ್ನು ಅಭಿವೃದ್ಧಿ ಪಥದಲ್ಲಿ ತೆಗೆದುಕೊಂಡು ಹೋಗೋಣ ಎಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಪಾಟಾಳ್ ನಾಗರಾಜ್.—ಆಡಳಿತ ಪಕ್ಷದಲ್ಲಿ ಒಡಕು ಇಲ್ಲ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಒಡಕಿಲ್ಲ ಎಂದು ಹೇಳುವುದನ್ನು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ, ಮಾನ್ಯ ಮಂತ್ರಿಗಳು ಹೇಳಿದ್ದು ಸರಿಯಲ್ಲ.....

Mr. DEPUTY SPEAKER.—If it had been raised in the form of point of order, I would have given the ruling.

Sri H. SIDDAVEERAPPA (Harihar).—Now Sir, that you gave an opportunity to raise this point through the Leader of the Opposition, even though the subject was not on the agenda I would like to say a few words.

Mr. DEPUTY SPEAKER.—If there is a change in the Leadership of the Party there is no necessity to give any ruling about it.

†ಶ್ರೀ ಎಚ್. ಸಿದ್ಧವೀರಪ್ಪ.—ಮಾನ್ಯ ಸಭೆಯ ವಿರೋಧಪಕ್ಷದ ನಾಯಕರು ಒಂದು ಸೂಚನೆಯನ್ನು ತಂದ ಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟರು. ಅದನ್ನು ಬಹಳ ಸಾವಧಾನದಿಂದ ಕೇಳಿದೆ. ಅವರು ಹೇಳಿದ್ದರಲ್ಲಿ ಕಾಂಗ್ರೆಸ್ ಪಕ್ಷದವರೇ ರಾಜ್ಯಭಾರ ಮಾಡುತ್ತಿದ್ದಾರೆ, ಅದೇ ನೀತಿ ಇದೆ, ಅದೇ ಥೋರಣಿ ಇವೆ, ಅದೇ ರೀತಿ ಮುಂದುವರಿಯುತ್ತವೆ

ಎಂದು ಹೇಳಿದರು. ಇದನ್ನು ಕೇಳಿ ನನಗೆ ಸ್ವಲ್ಪ ಒಂದು ರೀತಿಯ ವ್ಯಸನವೂ ಆಯಿತು, ಗಾಬರಿಯೂ ಆಯಿತು. ಏಕೆಂದರೆ ಈ ದೇಶಕ್ಕೆಲ್ಲ ಗೊತ್ತಿತ್ತು, ಹಿಂದೆ ಇದ್ದ ಆಡಳಿತ ಉನುಬನಲ್ಲಿ ಸಿಕ್ಕಿಕೊಂಡು ಮೇಲೆ ಏಳುತ್ತ ಇರಲಿಲ್ಲ, ಆದುದರಿಂದ ಬೇರೆ ಮಂತ್ರಿಮಂಡಲ ಬಂದರೆ ಅದಕ್ಕೆ ಒಂದು ಹೊಸ ಹುರುಪು ಕೊಟ್ಟು ರಾಜ್ಯಭಾರ ಸುಗಮವಾಗಿ ನಡೆಯುವಂತೆ ತೆಗೆದುಕೊಂಡು ಹೋಗಬಹುದು ಎನ್ನುವ ಆಸೆ ಎಲ್ಲ ಇತ್ತು ಎಂದು ಅನೇಕ ಸಾರಿ ಈ ಸಭೆಯಲ್ಲಿ ಹೇಳಿದ್ದೇವೆ. ದೇಶದ ಹಿತದೃಷ್ಟಿಯಿಂದ ಎಲ್ಲರ ಸಹಕಾರವನ್ನೂ ಅಪೇಕ್ಷೆ ಮಾಡುತ್ತೇನೆ ಎನ್ನುವ ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಒಂದು ವಿಷಯವನ್ನು ಈ ಸಮಯದಲ್ಲಿ ನಾನು ಈ ಸಭೆಯ ಮೂಲಕ ಅವರ ಗಮನಕ್ಕೆ ತರಬೇಕೆಂದು ಇಚ್ಛೆಪಟ್ಟು ಎದ್ದು ನಿಂತಿದ್ದೇನೆ.

ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಆಡಳಿತ ಪರಿಸ್ಥಿತಿ ಹೇಗಿದೆ ಎಂದರೆ ಆಡಳಿತದ ಕೀಲುಗಳೆಲ್ಲ ಸಡಿಲವಾಗಿವೆ. ಎಷ್ಟೋ ಕೀಲುಗಳಿಲ್ಲದ ಗಾಡಿಗಳು ಓಡುತ್ತಿವೆ ಎಂದು ಹೇಳಿದರೂ ತಪ್ಪಾಗಲಾರದು. ಅಧಿಕಾರಿಗಳ ಮೇಲೆ ಸರಿಯಾದ ಲಗಾಮು ಇಟ್ಟು ಆಡಳಿತವನ್ನು ಸರಿಯಾಗಿ ತೆಗೆದುಕೊಂಡು ಹೋಗದೆ ಇದ್ದರೆ ಈ ಬ್ಯೂರಾಕ್ರೆಸಿ ಕೈಯಲ್ಲಿ ಈ ದೇಶ ಉಳಿಯುವುದಿಲ್ಲ ಎನ್ನುವುದನ್ನು ಮೊದಲು ಈ ಮಂತ್ರಿಮಂಡಲ ಎಷ್ಟು ಜಾಗ್ರತೆ ಆರ್ಡರ್ ಮಾಡಿಕೊಳ್ಳುತ್ತದೋ, ಅಷ್ಟೂ ಈ ದೇಶಕ್ಕೆ ಒಳ್ಳೆಯದು ಎಂದು ಭಾವಿಸಿದ್ದೇನೆ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಯಾರೂ ಸರಿಯಾದ ರೀತಿಯಿಂದ ಲಗಾಮನ್ನು ಹಿಡಿದುಕೊಂಡು ಹೋಗದೆ ಇರುವುದರಿಂದ ಆಡಳಿತದಲ್ಲಿರತಕ್ಕ ಆಡಳಿತವರ್ಗ ಸರಿಯಾಗಿ ನಡೆಸಿಕೊಂಡು ಹೋಗುತ್ತಿಲ್ಲ. ಇವೊತ್ತಿನ ದಿವಸ ಒಂದೇ ಒಂದು ಉದಾಹರಣೆಯನ್ನು ಹೇಳಬೇಕೆಂದರೆ ಮಾನ್ಯ ಮುಖ್ಯ ಮಂತ್ರಿ ಒಂದು ಹೇಳಿಕೆಯನ್ನು ಕೊಟ್ಟು there are three bug bears ಎಂದು ಹೇಳಿದರು. ಆ ಪತ್ರಿಕೆ ಇವೊತ್ತು ತರಲಿಲ್ಲ. ಆಡಳಿತದಲ್ಲಿ ಒಬ್ಬ ತಹಸೀಲ್ದಾರ ಮಾಡತಕ್ಕ ವಿಚಾರದಲ್ಲಿ ಸಹ ಕೆಲವರು ನನಗೆ ಕಾಗದ ಬರೆಯುತ್ತಾರೆ ಎಂದು ಹೇಳಿದರು. ಇದಕ್ಕೆ ಕಾರಣವಿಷ್ಟೆ. ನನ್ನ ಸ್ವಂತ ಅನುಭವದ ಮೇಲೆ ಹೇಳುತ್ತಿದ್ದೇನೆ ಸರ್ಕಾರದಲ್ಲಿ ಟೆಲಿಫೋನ್ ಸೌಕರ್ಯವಿದೆ. ಅವರು ಎಷ್ಟು ಬಾರಿ ಫೋನ್ ಮಾಡಿದರೂ ಆಗಬಹುದು. ಆದೇ ಒಬ್ಬ ಖಾನಗಿ ವ್ಯಕ್ತಿ ಫೋನ್ ಮಾಡಬೇಕಾದರೆ ಪ್ರತಿ ಸಲ ಫೋನ್ ಮಾಡಿದಾಗಲೂ 20 ಪೈಸೆ ಕೊಡಬೇಕು. ಸಾರ್ವಜನಿಕರಿಂದ ಅನೇಕ ಬೇಡಿಕೆಗಳು ಬಂದಾಗ ಸಣ್ಣ ಸಣ್ಣ ವಿಷಯಗಳಿಗೆ ಅಧಿಕಾರಿಗಳಿಗೆ ಹತ್ತು ಸಾರಿ, ಇಪ್ಪತ್ತು ಸಾರಿ ಟೆಲಿಫೋನ್ ಮಾಡಿದರೂ ಅದಕ್ಕೆ ಮನ್ನಣೆ ಕೊಡದೆ ಇರತಕ್ಕ ಕೆಲವು ನಿದರ್ಶನಗಳು ನನ್ನಂಥವನ ಅನುಭವಕ್ಕೆ ಬಂದಿವೆ. ನಾನು ಕೆಲವು ಕಾಲ ಆಡಳಿತದ ಹೊರೆಯನ್ನು ಹೊತ್ತಿದ್ದೇನೆ. ಎಲ್ಲ ಅಧಿಕಾರಿಗಳೂ ಹೀಗೆಯೇ ಇದ್ದಾರೆ ಎಂದು ನಾನು ಹೇಳುವುದಿಲ್ಲ. ಸ್ವೀಪಿಂಗಾ ಜನರಲೈಸೇಷನ್ ಮಾಡುತ್ತಿಲ್ಲ. ಒಳ್ಳೆಯ ಅಧಿಕಾರಿಗಳೂ ಇದ್ದಾರೆ, ದಕ್ಷರೂ ಇದ್ದಾರೆ. ಆದೇ ರೀತಿ ಅದಕ್ಕೆ ತದ್ವಿರುದ್ಧವಾಗಿರತಕ್ಕವರೂ ಇದ್ದಾರೆ. ಹತ್ತೂವರೆ ಗಂಟೆಗೆ ಬಂದು 5 ಗಂಟೆಗೆ ಹೋಗತಕ್ಕ ಅಧಿಕಾರಿಗಳೂ ಇದ್ದಾರೆ. ಈ ಎಲ್ಲ ದೃಷ್ಟಿಯಿಂದ ಆಡಳಿತವನ್ನು ಸರಿಮಾಡಬೇಕಾದರೆ ನಮ್ಮ ದಕ್ಷತೆ ಮೊದಲು ಪ್ರದರ್ಶನವಾಗಬೇಕು. ಹಾಗೆ ಮಾಡಿದರೆ ಬಹುಮಟ್ಟಿಗೆ ಪ್ರಜಾಪ್ರಭುತ್ವದಲ್ಲಿ ಉಳಿಗಾಲವಿರುತ್ತದೆ. ಇಲ್ಲದೆ ಇದ್ದರೆ ಇಲ್ಲ. ಇದನ್ನು ನೀವು ಯಾವರೀತಿ ಮಾಡುತ್ತೀರಿ ಎಂದು ನೋಡಬೇಕು. ಈಗಾಗಲೇ ನಿಮ್ಮ ಆಡಳಿತ ಬಂದು ಕೆಲವು ತಿಂಗಳಾಗಿದೆ. ಇನ್ನು ಅದೇ ರೀತಿ ಹೋಗತಕ್ಕ ಮಾರ್ಗವನ್ನು ಬಿಟ್ಟು ಬೇರೆ ರೀತಿಯಿಂದ ತೆಗೆದುಕೊಂಡು ಹೋಗಬೇಕು. ನಿಮ್ಮ ಆಡಳಿತದಲ್ಲಿ ಎಷ್ಟೋ ಹೊಸ ಮಂತ್ರಿಗಳನ್ನು ತೆಗೆದುಕೊಂಡಿದ್ದೀರಿ. ಅನೇಕರು ನಮಗೆ ಪರಿಚಯವಿಲ್ಲ. ಪರಿಚಯವನ್ನು ಮಾಡಿಕೊಳ್ಳಬೇಕಾದ ಪ್ರಸಂಗ ಬರಬಹುದು. ಮೊದಲನೆ ದಿವಸ ನಮ್ಮ ನಿಮ್ಮ ಇಂಟ್ರೊಡಕ್ಷನ್ ಆಗಿದ್ದರೆ ಚೆನ್ನಾಗಿತ್ತು ಎಂದು ಕಾಣುತ್ತದೆ. ನಿಮ್ಮ ಕೈಯಲ್ಲಿ ದೈವನಿಯಾಮಕವಾದ ಏನು ಅಧಿಕಾರ ಶಕ್ತಿ ಇದೆ ಅದನ್ನು ಯಾವರೀತಿ ಮಾಡುತ್ತೀರಿ, ಹೇಗೆ ನಿರ್ವಹಣೆ ಮಾಡುತ್ತೀರಿ, ನೀವು ಯಾವರೀತಿ ದೇಶವನ್ನು ತೆಗೆದುಕೊಂಡು ಹೋಗುತ್ತೀರಿ ಎನ್ನುವುದರ ಮೇಲೆ ಈ ಕಡೆಯ ಪಕ್ಷದವರ ಸಹಕಾರ ನೀವು ಏನು ಕೇಳಿದ್ದೀರಿ ಅದನ್ನು ವಿಚಾರ ಮಾಡತಕ್ಕುದು ಬರುತ್ತದೆ. ನೀವೇನಾದರೂ ತಪ್ಪು ರೀತಿಯಿಂದ ಆಡಳಿತ ಮಾಡಿದರೆ ನಾವು ಖಡಾಖಂಡಿತವಾಗಿ ಕಾಂಗ್ರೆಸ್ ಪಕ್ಷದವರನ್ನು ಖಂಡಿತವಾಗಿ ಖಂಡಿಸಿ ಮಾಡಿ ಹೇಳಬೇಕಾಗುತ್ತದೆ. ಇದಕ್ಕೆ ಈ ಸಂದರ್ಭ ಸಿಕ್ಕಿದ್ದರಿಂದ ಒಂದೆರಡು ಮಾತನ್ನು ಈ ಸಮಯದಲ್ಲಿ ಹೇಳಿದ್ದೇನೆ ; ಮತ್ತು ದೇಶ ಯಾವರೀತಿ ಇದರ ವಿಚಾರದಲ್ಲಿ ಯೋಚನೆ ಮಾಡುತ್ತದೆ ಎನ್ನುವುದನ್ನೂ ತಿಳಿಸಿದ್ದೇನೆ.

† ಶ್ರೀ ಎಸ್. ಶಿವಪ್ಪ.—ಮಾನ್ಯ ವೀರೇಂದ್ರ ಪಾಟೀಲರು ಹೊಸ ಮುಖ್ಯ ಮಂತ್ರಿಗಳಾಗಿ ಬಂದ ಮೇಲೆ ಹಿಂದೆ ಇದ್ದಂತೆಯೇ ಮುಂದುವರಿಯುತ್ತೇವೆಂದು ಹೇಳಿದ್ದಾರೆ. ಒಂದೇ ಪಕ್ಷ

(ಶ್ರೀ ಎಚ್. ಶಿವಪ್ಪ)

ಅಡಳಿತದಲ್ಲಿರುವಾಗ ಆದೇ ನೀತಿ ಮುಂದುವರಿಯುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ. ಅವರು ಒಂದು ವಿಷಯಕ್ಕೆ ಮಾತ್ರ ಉತ್ತರ ಕೊಡಬೇಕಾಗಿಲ್ಲ. ಹಿಂದೆ ಮುಖ್ಯಮಂತ್ರಿಗಳಾಗಿದ್ದ ಶ್ರೀವಾನ್ ನಿಜಲಿಂಗಪ್ಪನವರು ಇದೇ ಶಾಸನ ಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟರು. ಮುಂದಿನ ಶಾಸನ ಸಭೆ ಸೇರುವುದಕ್ಕೆ ಮುಂಚೆ ಮಂತ್ರಿಗಳು, ಮಾಜಿಮಂತ್ರಿಗಳು ಮತ್ತು ಇತರ ದೊಡ ದೊಡ್ಡ ಹುದ್ದೆಯಲ್ಲಿದ್ದ ಕಾಂಗ್ರೆಸ್ ಪಕ್ಷದವರ ಆಸ್ತಿಪಾಸ್ತಿ 1947ನೇ ಇಸವಿಯಲ್ಲಿ ಏನಿತ್ತು, ಇವೊತ್ತ ಏನಿದೆ ಎನ್ನುವ ವಿವರಗಳನ್ನು ಒದಗಿಸುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದರು. ಈಗ ಬಂದಿರುವ ಮುಖ್ಯ ಮಂತ್ರಿಗಳೂ ಕೂಡ ಈಗ ಮಂತ್ರಿಗಳಾಗಿರುವವರ ಆಸ್ತಿಪಾಸ್ತಿಯ ವಿವರಗಳನ್ನು ಕೊಡಬೇಕೆಂದು ಕೇಳಿರುವುದಾಗಿ ಹೇಳಿದ್ದಾರೆ. ಈ ವಿವರಗಳ ಆಧಾರದ ಮೇಲೆ ಇವೊತ್ತು ಈ ಶಾಸನ ಸಭೆಯಲ್ಲಿ ಮಂತ್ರಿಗಳಾಗಿ ಆರೂಢರಾಗಿರುವವರ ಚರಿತ್ರೆಯನ್ನು ದೇಶಕ್ಕೆ ಹೇಳಬೇಕು. ಶ್ರೀವಾನ್ ನಿಜಲಿಂಗಪ್ಪನವರು ಬರೀ ಮಾತಿನಲ್ಲಿ ಹೇಳುತ್ತಿದ್ದರು. ಈಗಿನ ಮಾನ್ಯ ಮುಖ್ಯ ಮಂತ್ರಿಗಳಾದರೂ ಅವರು ಹೇಳಿರುವಂತೆ ಎಲ್ಲ ಮಂತ್ರಿಗಳ ಆಸ್ತಿಪಾಸ್ತಿಗಳ ವಿವರವನ್ನು ಸಭೆಯ ಮುಂದೆ ಮಂಡಿಸುತ್ತಾರೆ, ನಾವು ಇಲ್ಲಿಗೆ ಬರುವ ವೇಳೆಗೆ ಅದು ಸಭೆಯ ಮುಂದೆ ಇರುತ್ತದೆ ಎಂದು ಭಾವಿಸಿದ್ದೆ. ಅದು ಇನ್ನೂ ಬರಲಿಲ್ಲ. ಇವರಾದರೂ ಕೂಡ ಈ ಶಾಸನ ಸಭೆ ಮುಗಿಯುವುದರೊಳಗಾಗಿ ಮಂತ್ರಿ ಮಂಡಲದಲ್ಲಿರುವ ಎಲ್ಲರ ಆಸ್ತಿಪಾಸ್ತಿ 1947ನೆ ಇಸವಿಯಲ್ಲಿ ಏನಿತ್ತು, ಇವೊತ್ತು ಏನಿದೆ ಎನ್ನುವ ವಿವರಗಳನ್ನು ಕೊಟ್ಟರೆ ದೇಶ ಇವರ ಮಾತನ್ನು ನಂಬುತ್ತದೆ, ಎಂದು ಹೇಳುತ್ತೇನೆ.

†ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ವಿರೋಧ ಪಕ್ಷದ ನಾಯಕರು ಇನ್ನೊಂದು ಪ್ರಶ್ನೆಯನ್ನು ಎತ್ತಿದ್ದಾರೆ. ಮೊದಲೇ ಕೇಳಿದ್ದರೆ ಆದಕ್ಕೂ ಉತ್ತರ ಕೊಡಬಹುದಾಗಿತ್ತು. ಪ್ರತಿಯೊಂದು ಮಾತಿಗೂ ಒರೆಗಲ್ಲನ್ನು ಹಚ್ಚುವುದರಲ್ಲಿ ಅರ್ಥವಿಲ್ಲ. ಆಸ್ತಿಪಾಸ್ತಿ ವಿವರಗಳ ವಿಚಾರದಲ್ಲಿ ಮುಚ್ಚು ಮರೆ ಮಾಡಬೇಕು ಎನ್ನುವ ಅಭಿಪ್ರಾಯವಿಲ್ಲ. ಮುಂಚೆ ಇದ್ದ ಮು ್ಯ ಮಂತ್ರಿಗಳು ಈ ವಿಷಯದಲ್ಲಿ ಎಲ್ಲರಿಗೂ ಪತ್ರಗಳನ್ನು ಬರೆದಿದ್ದಾರೆ. ಕೆಲವರು ವಿವರಗಳನ್ನು ಸಲ್ಲಿಸಿದ್ದಾರೆ. ಕೆಲವರು ಸಲ್ಲಿಸಿರಲಿಲ್ಲ. ನಾನು ಬಂದಮೇಲೆ ಯಾರು ಯಾರು ವಿವರಗಳನ್ನು ಸಲ್ಲಿಸಿರಲಿಲ್ಲ ಅವರಿಗೆಲ್ಲ ರಿಮೈಂಡರ್ ಕಳಿಸಿದ್ದೇನೆ. ನಮ್ಮ ಮಂತ್ರಿ ಮಂಡಲದಲ್ಲಿ ಯಾರು ಯಾರು ಮಂತ್ರಿಗಳಾಗಿದ್ದಾರೆ ಅವರಿಗೆಲ್ಲ ಆಸ್ತಿಪಾಸ್ತಿಗಳ ಬಗ್ಗೆ ಡಿಕ್ಲರೇಷನ್ ಕೊಡಬೇಕು, ಸ್ಟೇಟ್‌ಮೆಂಟ್ ಕೊಡಬೇಕು ಎಂದು ಕೇಳಿದ್ದೇನೆ. ಅವರು ಕೊಟ್ಟಿದ್ದಾರೆ. ಕೆಲವರು ನಿಮಗೆ ಈ ರೀತಿ ಕೇಳುವುದಕ್ಕೆ ಏನು ಅಧಿಕಾರ ಏದೆ, ಏಕೆ ಕೇಳುತ್ತೀರಿ ಎಂದು ಬರೆದಿದ್ದಾರೆ. ಸಭೆಯ ಟೇಬಲ್ ಮೇಲೆ ಬೇಕಾದರೆ ಎಲ್ಲ ಹೇಪರುಗಳನ್ನೂ ಹರಡುತ್ತೇನೆ, ಎಲ್ಲವನ್ನೂ ಓದಿಕೊಳ್ಳಿ. ಈ ಅಧಿವೇಶನದಲ್ಲಿ ಒಂದು ಪ್ರಶ್ನೆ ಕೂಡ ಈ ವಿಚಾರದಲ್ಲಿ ಬಂದಿದೆ. ನಾನು ವಿಚಾರ ಮಾಡುತ್ತಿದ್ದೇನೆ. ಯಾರು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ, ಯಾರು ಕೊಡುವುದಕ್ಕೆ ನಿರಾಕರಿಸಿದ್ದಾರೆ, ಯಾರು ಇನ್ನೂ ಕೊಟ್ಟಿಲ್ಲ ಅದನ್ನು ತಯಾರು ಮಾಡುತ್ತ ಇದ್ದಾರೆ. ತಯಾರಾದ ತಕ್ಷಣ ಟೇಬಲ್ ಮೇಲೆ ಇಡುತ್ತೇನೆ. ಇದಕ್ಕೆ ಸಂಬಂಧಪಟ್ಟ ಪ್ರಶ್ನೆಗೆ ಉತ್ತರ ಕೊಡುವಾಗ್ಗೆ ಯಾರು ಆಸ್ತಿಪಾಸ್ತಿಗಳನ್ನು ಡಿಕ್ಲೇರ್ ಮಾತಿ ಎಂದು ಹೇಳಿದ್ದೇವೆ, ಅವರ ಪಟ್ಟಿಯನ್ನೂ ಕೊಡುತ್ತೇನೆ, ಯಾರು ಡಿಕ್ಲೇರ್ ಮಾಡಿದ್ದಾರೆ, ಯಾರು ಡಿಕ್ಲೇರ್ ಮಾಡುವುದಕ್ಕೆ ಒಪ್ಪಿಲ್ಲ ಮತ್ತು ನಿರಾಕರಿಸಿದ್ದಾರೆ ಅವರ ಪಟ್ಟಿಯನ್ನೂ ಕೊಡುತ್ತೇನೆ. ಆ ಪಟ್ಟಿ ಎರ್ಲಾ ಬಂದ ನಂತರ ಮುಂದೆ ಏನು ವಿಚಾರ ಮಾಡಬೇಕು ಏನ್ನುವುದನ್ನು ಈ ಸಭೆಯು ಮುಂದೆ ಅಲೋಚನೆ ಮಾಡಲಿ.

ಶ್ರೀ ಮಹದೇವ್ ಜಿ. ಬಣಕಾರ್.—ಮುಖ್ಯ ಮಂತ್ರಿಗಳು ವಿರೋಧ ಪಕ್ಷದ ನಾಯಕರ ಹೇಳಿಕೆಗೆ ಉತ್ತರವಾಗಿ ಹಿಂದಿರತಕ್ಕ ಕಾಂಗ್ರೆಸ್ಸಿನವರಿಗೂ ಈಗ ಇರತಕ್ಕ ಕಾಂಗ್ರೆಸ್ಸಿನವರಿಗೂ ಯಾವ ರೀತಿಯಲ್ಲೂ ಬದಲಾವಣೆ ಇಲ್ಲ ಎಂದು ಹೇಳಿದರು. ಆದರೆ ಲಾರ್ಬಹದ್ದೂರ್ ಶಾಸ್ತ್ರಿಗಳೂ ಕಾಂಗ್ರೆಸ್ಸಿನವರಾಗಿದ್ದರು, ಕೈರಾನ್‌ರವರೂ ಕಾಂಗ್ರೆಸ್ಸಿನವರಾಗಿದ್ದರು, ಆವರೆ ಅವರ ವ್ಯಕ್ತಿತ್ವದಲ್ಲಿ ಅಂತರ ಇದೆ. ಅವರುಗಳು ಕಾಂಗ್ರೆಸ್ಸಿನವರಾಗಿದ್ದರೂ ಕೂಡ ಪ್ರತ್ಯೇಕತೆ ಮತ್ತು ವ್ಯಕ್ತಿತ್ವ ಇರುತ್ತದೆ. ಆ ದೃಷ್ಟಿಯಿಂದ ಕೇಳುತ್ತೇನೆ. ಇದು ಟೀಕೆ ಅಲ್ಲ. ವ್ಯಕ್ತಿಗಳ ಅಭಿರುಚಿ, ವ್ಯಕ್ತಿಗಳ ಧ್ಯೇಯೋಧೋರಣೆಗಳು, ಭಿನ್ನಭಿನ್ನವಾಗಿರುವ ಕಾರಣ ಹಿಂದಿನ ಮುಖ್ಯ ಮಂತ್ರಿಗಳು ಹಾಕಿಕೊಟ್ಟ ಸತ್‌ಸಂಪ್ರದಾಯಗಳನ್ನು ಅನುಸರಿಸುತ್ತಾರೆಯೋ ಅಥವಾ ಕಾಲಮಾನ ಪರಿಸ್ಥಿತಿಗೆ ಅನುಸಾರವಾಗಿ ರಾಷ್ಟ್ರಾಭಿವೃದ್ಧಿಗೆ ನಿಮ್ಮದೇ ಆದಂಥ ಧೋರಣೆಗಳನ್ನು ದೇಶದಲ್ಲಿ ತರುತ್ತೀರಾ ಎಂದು ಮುಖ್ಯ ಮಂತ್ರಿಗಳಿಗೆ ಈ ಪ್ರಶ್ನೆ ಕೇಳುತ್ತೇನೆ.